**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2006**

**ಉಪಾಧ್ಯಕ್ಷರು:** ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಪ್ರಸ್ತಾವ ಏನೆಂದರೆ:-**

**ಉಪಾಧ್ಯಕ್ಷರು:** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

**ಖಂಡ 1 ಇತ್ಯಾದಿ**

**ಉಪಾಧ್ಯಕ್ಷರು:** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳು ಈ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಹೆಸರು ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ, "2006ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

**ಉಪಾಧ್ಯಕ್ಷರು:** ಪ್ರಸ್ತಾವ ಏನೆಂದರೆ; "2006ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:** ಮಾನ್ಯ ಉಪಾಧ್ಯಕ್ಷರೆ, ಇದು ಎರಡು ವರ್ಷ ಎಂದಿದ್ದರೆ ಮಾತ್ರ ಒಪ್ಪಬೇಕು.

**ಶ್ರೀ ಜಗದೀಶ್ ಶೆಟ್ಟರ್:** ಹೌದು, ಎರಡು ವರ್ಷಕ್ಕೆ....

**ಉಪಾಧ್ಯಕ್ಷರು:** ಎರಡು ವರ್ಷಕ್ಕೆ ಎಂದು ಒಪ್ಪಿಕೊಂಡಿದ್ದಾರಲ್ಲಾ.

**ಶ್ರೀ ಜಗದೀಶ್ ಶೆಟ್ಟರ್:** ಆ ಬಿಲ್‌ಗೆ ಅಮೆಂಡ್‌ಮೆಂಟ್ ತಂದಿದ್ದೇವಲ್ಲಾ ಅದು ಬೇಡ.

## 7. ಪ್ರಕಟಣೆ

**ಉಪಾಧ್ಯಕ್ಷರು:** ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀಮಾನ್ ಯಡಿಯೂರಪ್ಪನವರು, ಮಾನ್ಯ ಶಾಸಕರು, ಪ್ರತಿನಿಧಿಗಳು ಹಾಗೂ ಗಣ್ಯ ಆಹ್ವಾನಿತರ ಗೌರವಾರ್ಥವಾಗಿ ರಾತ್ರಿ 10 ಗಂಟೆಗೆ, ಮೊದಲು 8 ಗಂಟೆಗೆ ಎಂದು ಇತ್ತು, ಆದರೆ ಈಗ 10 ಗಂಟೆಗೆ ಆಗಿದೆ, ಆದ್ದರಿಂದ ಬೆಳಗಾವಿ ಜೆ.ಎನ್. ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ತಾವುಗಳೆಲ್ಲಾ ದಯಮಾಡಿ ಇದರಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 9.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 9 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 29.9.06ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು)

**ಅನುಬಂಧ–1**

**ಕರ್ನಾಟಕ ವಿಧಾನಸಭೆ**

**ಹನ್ನೆರಡನೇ ವಿಧಾನಸಭೆ**

**ಮೂರನೇ ಅಧಿವೇಶನ**

**(ಮುಂದುವರೆದ ಉಪವೇಶನಗಳು)**

**ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ, 2004**

**[ 2004ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 2 ]**

**(ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಹಾಗೂ ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಎರಡನೇ ಬಾರಿಗೆ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ರಾಜ್ಯದಲ್ಲಿ ಕಾಕಂಬಿ ಉತ್ಪಾದನೆ, ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಕಾಕಂಬಿಯ ಉತ್ಪಾದನೆ, ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುವುದು ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಇತರ ಕೆಲವು ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಇದು ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.